ಬೆಂಗಳೂರು ನಗರದಲ್ಲಿ ಅನಾಥ ಬೀದಿ ಮಕ್ಕಳು

4883 - ಶ್ರೀ ಎ. ನಾರಾಯಣ ಸ್ವಾಮಿ (ಆನೇಕಲ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಅನಾಥ ಬೀದಿ ಮಕ್ಕಳಿರುವುದು ನಿಜವೇ? ಎಷ್ಟು ಜನ ಬೀದಿ ಮಕ್ಕಳಿದ್ದಾರೆ?*

ಆ) *ಬೀದಿ ಮಕ್ಕಳ ಹಾವಳಿ ನಿವಾರಣೆಗೆ ಸರ್ಕಾರದ ಮಾರ್ಗೋಪಾಯಗಳೇನು?*

ಇ) *ಬೀದಿ ಮಕ್ಕಳ ರಕ್ಷಣೆಗೆ ಪರಿಹಾರ ಕೇಂದ್ರವೇನಾದರೂ ರಾಜ್ಯದಲ್ಲಿವೆಯೇ?*

ಈ) *ಈ ದಿಸೆಯಲ್ಲಿ ಸ್ಥಳೀಯ ಸೇವಾ ಸಂಸ್ಥೆಗಳ ನೆರವು ಪಡೆಯಲು ಸರ್ಕಾರ ನಿರ್ಧರಿಸಿದೆಯೇ?*

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು. ಸುಮಾರು 90,000 ರಿಂದ 1.00 ಲಕ್ಷ.

ಆ) ಕೇಂದ್ರ ಸರ್ಕಾರವು ಬೀದಿ ಮಕ್ಕಳ ಕಲ್ಯಾಣಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಅಲ್ಲದೆ ಬಾಲ ಕಾಯ್ದೆ ಕೆಳಗೆ ನಿರ್ಗತಿಕ ಹಾಗೂ ನಿರ್ಲಕ್ಷಿತ ಮಕ್ಕಳ ರಕ್ಷಣೆ ಪಾಲನೆ ಪೋಷಣೆಗಾಗಿ ಕ್ರಮಕೈಗೊಳ್ಳಲಾಗುತ್ತಿದೆ.

ಇ) ರಾಜ್ಯದಲ್ಲಿ ಪರಿಹಾರ ಕೇಂದ್ರಗಳಿರುವುದಿಲ್ಲ. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈ ಮಕ್ಕಳಿಗಾಗಿ ರಾತ್ರಿಹಗಲು ತಂಗುದಾಣಗಳನ್ನು ನಡೆಸುತ್ತದೆ.

ಈ) ಹೌದು.

ಆನೇಕಲ್ ಕ್ಷೇತ್ರದ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸುವುದು

4884 - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆನೇಕಲ್ ಕ್ಷೇತ್ರದಲ್ಲಿ ಸಾರಿಗೆ ಸಂಪರ್ಕವಿಲ್ಲದ ಗ್ರಾಮಗಳ ಪಟ್ಟಿ ಮತ್ತು ಆ ಗ್ರಾಮಗಳು ಸಾರಿಗೆ ಸಂಪರ್ಕ ಪಡೆಯಲು ಇರುವ ದೂರವೆಷ್ಟು?*

ಆ) *ಕೆಲವು ಗ್ರಾಮಗಳಿಂದ ಸಾರಿಗೆ ಸಂಪರ್ಕದ ಸೌಲಭ್ಯಕ್ಕಾಗಿ ಮನವಿ ಪತ್ರಗಳು ಬಂದಿದೆಯೇ?*

ಇ) *ಈ ಗ್ರಾಮಗಳಿಗೆ ಸಾರಿಗೆ ಸಂಪರ್ಕಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಆನೇಕಲ್ ಕ್ಷೇತ್ರದಲ್ಲಿ 41 ಗ್ರಾಮಗಳಿಗೆ ಸಾರಿಗೆ ಸೌಲಭ್ಯವಿರುವುದಿಲ್ಲ (ಸದರಿ ಗ್ರಾಮಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ).

ಈ ಗ್ರಾಮಗಳು ಹಾಲಿ ಬಸ್ ಸೌಕರ್ಯ ಇರುವ ಕೊನೆಯ ಗ್ರಾಮಗಳಿಂದ ಸುಮಾರು 2 ರಿಂದ 3 ಕಿ.ಮೀ. ಗಳ ವ್ಯಾಪ್ತಿಯಲ್ಲಿರುತ್ತವೆ.

ಅ) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು (ದ)ಕ್ಕೆ ಆನೇಕಲ್ ತಾಲ್ಲೂಕಿನ ಕೆಲವು ಗ್ರಾಮಗಳಿಂದ ಸಾರಿಗೆ ಸಂಪರ್ಕ ಸೌಲಭ್ಯಕ್ಕಾಗಿ ಯಾವುದೇ ಮನವಿಗಳು ಬಂದಿರುವುದಿಲ್ಲ. 'ಆನೇಕಲ್ ಪಾಕೆಟ್ ಸ್ಕೀಂ' ಜಾರಿಯಲ್ಲಿರುವುದರಿಂದ ರಾಷ್ಟ್ರೀಕೃತ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸುವ ಬಗ್ಗೆ ಕರ್ನಾಟಕ ರಾಜ್ಯ ಸಾರಿಗೆ ನಿಗಮವು 10 ಗ್ರಾಮಗಳಿಂದ ಸಾರಿಗೆ ಸೌಲಭ್ಯಕ್ಕಾಗಿ ಮನವಿ ಸ್ವೀಕರಿಸಿದೆ.

ಇ) ಈ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು ಗ್ರಾಮಾಂತರ ಪ್ರದೇಶಗಳ ಮಾರ್ಗಗಳಲ್ಲಿ ಮಜಲು ವಾಹನ ರಹದಾರಿ ಕೋರಿ ಅರ್ಜಿ ಸಲ್ಲಿಸಿದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಆಧ್ಯತೆಯ ಮೇರೆಗೆ ಪರಿಗಣಿಸಿ ರಾಷ್ಟ್ರೀಕೃತವಲ್ಲದ ಮಾರ್ಗಗಳಲ್ಲಿ ರಹದಾರಿ ನೀಡುವ ಬಗ್ಗೆ ಕ್ರಮ ಕೈಗೊಳ್ಳುತ್ತದೆ. 'ಆನೇಕಲ್ ಪಾಕೆಟ್ ಸ್ಕೀಂ' ಜಾರಿಯಲ್ಲಿರುವುದರಿಂದ ರಾಷ್ಟ್ರೀಕೃತ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸುವ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು 8 ಗ್ರಾಮಗಳು ಅಂದರೆ ಬರೂರು, ಚಿಕ್ಕನಹಳ್ಳಿ, ಅರೆನೂರು, ತಟ್ಟನಹಳ್ಳಿ, ಅವಳತದೇನಹಳ್ಳಿ, ಮುತ್ತಾನಲ್ಲೂರು, ಸಾಮೇನಹಳ್ಳಿ, ಮತ್ತು ಹಂದೇನಹಳ್ಳಿಗಳ ಮನವಿಗಳನ್ನು ಪರಿಗಣಿಸಲಾಗಿದೆ. ಸಧ್ಯದಲ್ಲಿಯೇ ಮಾರನಾಯಕನಹಳ್ಳಿಗೆ ಬಸ್ ಸೌಕರ್ಯ ಒದಗಿಸಲಾಗುವುದು. ರಾಜ್‌ಮಾನಹಳ್ಳಿಯ ಸಂಪರ್ಕ ರಸ್ತೆಯು ಮೋಟಾರು ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಿರುವುದು ಕಂಡುಬಂದಿದೆ. ರಸ್ತೆಯನ್ನು ಮೋಟಾರು ವಾಹನ ಸಂಚಾರಕ್ಕೆ ತಕ್ಕಂತೆ ಸಿದ್ದಪಡಿಸಿದ ನಂತರ ಆ ಗ್ರಾಮಕ್ಕೆ ಬಸ್ ಸೌಲಭ್ಯ ಒದಗಿಸಲಾಗುವುದು.

ANNEXURE

LIST OF VILLAGES NOT SERVED IN ANEKAL TALUK AND THE NEAREST VILLAGES WHERE THE KSRTC BUS FACILITY IS AVAILABLE.

SL. NO.	Village	Nearest village from where Bus facility is available	Distance in kms
1	Adur Medahally	Adur	2
2	Ballur	TVS Cross	3
3	Bylahalli	Kamanahalli	2
4	Byrappanahally	Mantapa	1.5
5	Chikkanahally	Guddanahalli	2
6	Chikkanekkundi	Nekkundi	3

SL. NO.	Village	Nearest village from where Bus facility is available	Distance in kms
7	Choodasandra	Singasandra	2
8	Deshpande Guttahalli	Mugalur	2
9	Dodda Thimmasandra	Mugalur	3
10	Gottamaranahally	Mugalur	5
11	Kannaikana Agrahara	Banneraghatta	8
12	Kotiganahally	Handenahalli	1.5
13	Maranayakanahalli	M.R.Cross	2
14	Pandithana Agrahara	Mugulur	1.5
15	Rachamaranahally	Bestaramanahalli	2
16	Singasandra	Vanakanahalli	1.4
17	Srirampura	Jigani	3
18	Vaderahalli	Begahalli	4
19	Vabasandra	Jigani	2.5
20	Vaderamanchenahalli	Harapanahalli	5

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ಸಂಗ್ರಹಿಸಿರುವ ಹಣ

4886 - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳು ಹುಡ್ಕೋ ಬಾಂಡ್ ಮೂಲಕ ಒಟ್ಟು ಎಷ್ಟು ಹಣವನ್ನು ಸಂಗ್ರಹ ಮಾಡಿದೆ?

ಆ) ಯಾವ ಯೋಜನೆಗಳಿಗೆ ಈ ಹಣವನ್ನು ವಿನಿಯೋಗಿಸಲಾಗಿದೆ? ಯೋಜನೆವಾರು ಮಾಹಿತಿ ನೀಡುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹುಡ್ಕೋ ಬಾಂಡ್ ಮೂಲಕ ಯಾವುದೇ ಹಣವನ್ನು ಸಂಗ್ರಹ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.